## ದರಲೆ ಕುತ್ತರಿ

ಕರಾವಳಿಯಲ್ಲಿ ಮಳೆಗಾಲಕ್ಕಾಗಿ ದರಲೆ (ಪುರಳೆ) ಕುತ್ತರಿ ಮಾಡಿಟ್ಟಿರುತ್ತಾರೆ. ಕಾಡಿನಿಂದ ಪುರಳೆ ಗುಡಿಸಿ ತಂದು ಮಳೆ ನೀರು ಒಳ ಹೋಗದಂತೆ ಕುತ್ತರಿ ಮಾಡಿ ಇಡುವುದು ವಾಡಿಕೆ. ಜೋರು ಮಳೆ ಬರುತ್ತಿರುವಾಗ ಈ ಗೋಡೌನ್‌ನಿಂದಲೇ ಡ್ರೈ ಆಗಿರುವ ಪುರಳೆ ಬೇಕಷ್ಟೇ ತೆಗೆದು ಕೊಟ್ಟಿಗೆಯಲ್ಲಿ ರಾಸುಗಳಿಗೆ ಬೆಚ್ಚಗಿನ ಹಾಸಿಗೆ ಸಿದ್ಧ ಮಾಡುವುದು. ಮೇಲ್ಗಡೆ ಹಾಗೇ ಬಿಟ್ಟು ಸುತ್ತಲಿಂದ ಕುತ್ತರಿ ಬೀಳದಂತೆ ಅಷ್ಟಷ್ಟೇ ತೆಗೆಯುವುದು ರೈತರ ಉಪಾಯ. ಇಂತಹದ್ದೇ ಒಂದು ದರಲೆಯ ಮೇಲೆ ಹುಲ್ಲು, ಸೊಪ್ಪು ಬೆಳೆದು ನಿಂತಿರುವುದನ್ನು ಚಿತ್ರದಲ್ಲಿ ಕಾಣಬಹುದು.

–ರವಿರಾಜ ಹಾಲಂಬಿ



## ಮಾಯವಾದ 'ಮಣ'



ಸಂತೆಗೆ ಹೋದನು ಭೀಮಣ್ಣ
ಹಿಂಡಿಯ ಕೊಂಡನು ಹತ್ತು ಮಣ

ಎಂಬ ಜನಪ್ರಿಯ ಮಕ್ಕಳ ನೀತಿ ಕವನವನ್ನು ಕೇಳುತ್ತ ಬೆಳೆದವರು ನಾವು. ಒಂದು ಕಾಲದಲ್ಲಿ ಮಣ ಅಳತೆಯ ಮಾಪನವಾಗಿತ್ತು. ಹೆಚ್ಚು ಊಟ ಮಾಡುವವರನ್ನು 'ಮಣ ತಿಂತ್ಯಾ, ದಿನಾ ಇಡಿ ಮಲ್ಗತ್ಯಾ' ಎಂಬ ಮಾತಿಂದ ಆಡಿಕೊಳ್ಳಲಾಗಿತ್ತು. ಈಗಲೂ ಈ ಮಾತು ಪ್ರಚಲಿತದಲ್ಲಿದೆ. ಕೆ.ಜಿ.ಯ ಲೆಕ್ಕಕ್ಕೆ ಹೋಲಿಸಿದರೆ 12.5 ಕೆ.ಜಿ.ಗೆ ಒಂದು ಮಣ ಎಂಬ ಲೆಕ್ಕಾಚಾರವಿತ್ತು. ಧಾನ್ಯ, ಉಪ್ಪು, ಬೆಲ್ಲ ಮಾತ್ರವಲ್ಲದೇ ಕಟ್ಟಿಗೆಯನ್ನು ಕೂಡ ಮಣದ ಲೆಕ್ಕದಲ್ಲಿಯೇ ಅಳೆಯುತ್ತಿದ್ದರು. ಒಂದು ಸಮಯದಲ್ಲಿ ಹೆಂಚಿನ ಮಣ್ಣನ್ನು ಮಣದ ಲೆಕ್ಕದಲ್ಲಿಯೇ ಅಳೆಯುತ್ತಿದ್ದರು. ಕೆಲವೊಂದು ಪ್ರದೇಶಗಳಲ್ಲಿ ಮಣದ ತೂಕಕ್ಕೆ ಅಷ್ಟೇನೂ ನಿಖರತೆ ಇರಲಿಲ್ಲ. ಇಂದು ಗ್ರಾಂ, ಕೆ.ಜಿ. ಅತ್ಯಂತ ಜನಪ್ರಿಯ ಮಾಪನವಾಗಿದ್ದು ಮಣದ ಲೆಕ್ಕ ಮಾಯವಾಗುವುದರ ಜೊತೆಗೆ ಮಣದ ಕಲ್ಲು ಮಾಯವಾಗಿ ಆ ಪದವು ಕೂಡ ಮರೆಯಾಗುತ್ತ ಬಂದಿದೆ.

–ನವ್ಯ ಶಿವದೇವ ಮೊಗಟಾ, ನವದೆಹಲಿ



## ಭೀರಾ... ಒಂಟಿ ಜಲಧಾರಾ

ಭೀರಾ ಜಲಪಾತವು ಮಹಾರಾಷ್ಟ್ರದ ರಾಯಗಢ ಜಿಲ್ಲೆಯ ಮಾನ್ಗಾಂವ್ ತಾಲ್ಲೂಕಿನ ಭೀರಾ ಗ್ರಾಮದಲ್ಲಿದೆ. ಇದು ಒಂದು ಸುಂದರ ಪ್ರಾಕೃತಿಕ ತಾಣವಾಗಿದೆ. ಸಹ್ಯಾದ್ರಿ ಪರ್ವತ ಶ್ರೇಣಿಯಲ್ಲಿ, ಪುಣೆಯಿಂದ ಸುಮಾರು 50 ಕಿ.ಮೀ.ದೂರದ ತಮ್ಹಿನಿ ಘಾಟ್ ನಂತರ, ಭೀರಾ ಗ್ರಾಮದ ಅಣೆಕಟ್ಟಿನ ಬಳಿಯ ಕಾಡಿನಲ್ಲಿ ಈ ಜಲಪಾತ ಸದ್ದಿಲ್ಲದೆ ಧುಮುಕುತ್ತಿದೆ.

ಹಸುವಿನ ಕೆಚ್ಚಲಿಂದಿಳಿಯುವ ಶ್ವೇತ ಕ್ಷೀರ ಧಾರೆಯಂತೆ, ಕಣಿವೆಯ ಚಾಚು ಕಲ್ಲುಗಳ ನಡುವೆ ಏಕಧಾರೆಯಾಗಿ ಸುರಿಯುವ ಈ ಜಲಪಾತದ ನೋಟ ನಯನ ಮನೋಹರ. ಮಳೆಗಾಲದಲ್ಲಿ ಮೈದುಂಬಿ ದಟ್ಟೈಸುವ ಧಾರೆ ಟಿಸಿಲೊಡೆದಾಗ ಅದ್ಭುತ ರೂಪ ತಾಳುತ್ತದೆ. ಆದರೆ ಆಗ ಅಲ್ಲಿಗೆ ಸುತ್ತಿ ಬಳಸಿ ಹೋಗಬೇಕಾಗುವುದರಿಂದ ಮಳೆಗಾಲ ಮುಗಿದ ತಕ್ಷಣ ಭೇಟಿ ನೀಡುವುದು ಸೂಕ್ತ. ಅಚ್ಚಬಿಳಿಯ ಜಲಧಾರೆಯ ತಪ್ಪಲಲ್ಲಿ ಹಸಿರು ನೀಲ ವರ್ಣದ ಕಿರು ಸರೋವರ ಸೃಷ್ಟಿಯಾಗಿದೆ. ಆದ್ದರಿಂದಲೇ ಸ್ಥಳೀಯರು ದೇವಕುಂಡ ಜಲಪಾತವೆಂದೂ ಕರೆಯುತ್ತಾರೆ. ಇದರಲ್ಲಿ ಪ್ರವಾಸಿಗರು ಮುದದಿಂದ ಮಿಂದು, ಚಾಚು ಕಲ್ಲುಗಳ ಕೆಳಗೆ ಸುತ್ತಾಡಿ ಪ್ರವಾಸಾನಂದ ಸವಿಯುತ್ತಾರೆ.

ಜಲಪಾತವು ಸುತ್ತಮುತ್ತಲಿನ ದಟ್ಟ, ಹಸಿರು ಕಾನನ ಹಾಗೂ ಅಂಬಾ ನದಿಯ ಹರಿವಿನೊಂದಿಗೆ ಪ್ರಕೃತಿ ಸೌಂದರ್ಯಭರಿತ ಶಾಂತ ವಾತಾವರಣದಿಂದ ಪ್ರವಾಸಿಗರನ್ನು ಆಕರ್ಷಿಸುತ್ತದೆ. ಇಲ್ಲಿ ಮೋಡ, ಮಂಜು, ತಂಪಾದ ಮೆಲುಗಾಳಿಯ ಬೆಟ್ಟದ ದಾರಿಗಳು ಮತ್ತು ಸಣ್ಣ ಕಣಿವೆಗಳು ಅತೀ ಸುಂದರವಾಗಿ ಕಾಣಿಸುತ್ತವೆ. ಮಾತ್ರವಲ್ಲದೆ 1927ರಲ್ಲಿ ನಿರ್ಮಿಸಲಾದ ಭೀರಾ ಅಣೆಕಟ್ಟು, ಜಲವಿದ್ಯುತ್ ಕೇಂದ್ರದ (ಮುಲ್ಶಿ ಡ್ಯಾಮ್ ಪವರ್ ಹೌಸ್) ಜಲಾಶಯ ಮತ್ತು ನದಿ ಪ್ರವಾಹದಿಂದಾಗಿ ಈ ಜಲಪಾತವು ಇನ್ನಷ್ಟು ಪ್ರಸಿದ್ಧವಾಗಿದೆ. ಸಾಹಸಪ್ರಿಯರ ಸ್ವರ್ಗದಂತಿರುವ ಈ ಜಲಪಾತ ಮತ್ತು ಸುತ್ತಮುತ್ತಲಿನ ಪ್ರದೇಶವನ್ನು ಟ್ರೆಕ್ಕಿಂಗ್ ಹಾಗೂ ಛಾಯಾಗ್ರಾಹಕರು ಹೆಚ್ಚು ಇಷ್ಟ ಪಡುತ್ತಾರೆ. ಭೀರಾ ಜಲಪಾತ ಪ್ರದೇಶವು ವಾರಾಂತ್ಯದ ಪ್ರವಾಸ/ಚಾರಣಕ್ಕೆ ಸೂಕ್ತವೆನಿಸಿದ್ದು ಮುಂಬೈಯಿಂದ ಸುಮಾರು 120 ಕಿ.ಮೀ.ದೂರದಲ್ಲಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ